ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು ನಗರ
ಸಿ.ಸಿ.ನಂ.7334/2018

ಫಿರ್ಯಾದುದಾರರು ಃ ರಾಜ್ಯದ ಪರ ಬೊಮ್ಮನಹಳ್ಳಿ ಪೊಲೀಸ್ ಠಾಣೆ,
ಬೆಂಗಳೂರು.

- ವಿರುದ್ಧ –

ಆರೋಪಿತರು ಃ

1. ಅಶೋಕ್ ಛಲವಾದಿ ಬಿನ್ ಸಂಕಪ್ಪ, 30 ವರ್ಷ, ವಾಸಃ ಕಾಲುವೆ ಕಲ್ಲಾಪುರ ಗ್ರಾಮ ಮತ್ತು ಅಂಚೆ, ಹಾನಗಲ್ ತಾಃ, ಹಾವೇರಿ ಜಿಲ್ಲೆ.
2. ***ಮಂಜು.ಬಿ.ಬಿ.***
3. ***ರಾಮಾನುಜಂ***
4. ***ಮಹೇಶ್***
5. ಪಾಪೇಗೌಡ ಬಿನ್ ಲೇಟ್ ಕರಿಗಿರಿ ಗೌಡ, 35 ವರ್ಷ, ವಾಸಃ ನಾಗರಾಜರವರ ಮನೆ, 7ನೇ ಕ್ರಾಸ್, ವೆಂಕಟೇಶ್ವರ ದೇವಸ್ಥಾನದ ಹತ್ತಿರ, ಹೊಂಗಸಂದ್ರ, ಬೆಂಗಳೂರು.
6. ***ಮಂಜುನಾಥ್,***
7. ಎಂ.ವಿ.ಸುನಿಲ್ ಬಿನ್ ವೆಂಕಟೇಶ್, 21 ವರ್ಷ, ವಾಸ 3ನೇ ಕ್ರಾಸ್, ರೋಟರಿನಗರ, ಕೋಡಿಚಿಕ್ಕನಹಳ್ಳಿ, ಬೆಂಗಳೂರು ನಗರ.
8. ಪ್ರಸನ್ನ ಬಿನ್ ಚಂದ್ರು, 30 ವರ್ಷ, ವಾಸಃ ನಂ 380, ಎ ಬ್ಲಾಕ್, ಎಇಸಿಎಸ್ ಲೇಔಟ್, ಕೂಡ್ಲು, ಬೆಂಗಳೂರು ನಗರ.
9. ಲಿಂಗರಾಜು (ಅ) ಸ್ವಾಮಿ ಬಿನ್ ರಂಗಾರಾವ್, 34 ವರ್ಷ, ವಾಸಃ ನಂ-52, 1ನೇ ಮೈನ್, ಮುತುರಾಯಸ್ವಾಮಿ ಲೇಔಟ್, ಹುಳಿಮಾವು, ಬಿ ಜಿ ರಸ್ತೆ, ಬೆಂಗಳೂರು ನಗರ.
10. ವೆಂಕಟೇಶ್ ಬಿನ್ ಲೇಟ್ ಕಂಚೇಗೌಡ, 25 ವರ್ಷ, ವಾಸಃ ಆಂಜನೇಯ ಸ್ವಾಮಿ ದೇವಸ್ಥಾನದ ಹಿಂದೆ, ಮಹಾವೀರ್ ಮಾರ್ಷೆಲ್ ಅಪಾರ್ಟ್‌ಮೆಂಟ್ ಹತ್ತಿರ, ಕೋಡಿಚಿಕ್ಕನಹಳ್ಳಿ, ಬೆಂಗಳೂರು ನಗಠ
11. ***ರುಪಚಂದ್ರ***
12. ಸಂತೋಷ್ ಬಿನ್ ನಾಗರಾಜು, 22 ವರ್ಷ, ವಾಸಃ ಕೇ/ಆ ರೆಡ್ಡಿಯವರ ಬಿಲ್ಡಿಂಗ್, ಸಾಯಿ 21 ಲೇಡಿಸ್ ಹಾಸ್ಟೆಲ್ ಹತ್ತಿರ, ಭೈರೇಶ್ವರ ನಗರ, ಕೂಡ್ಲು, ಬೆಂಗಳೂರು.
13. ಆನಂದ ಬಿನ್ ರಾಜಪ್ಪ, 23 ವರ್ಷ, ವಾಸಃ ಮಲ್ಲೇಶ್‌ರವರ ಬಿಲ್ಡಿಂಗ್, 1ನೆ ಮೈನ್, 1ನೇ ಕ್ರಾಸ್, ಹೊಂಗಸಂದ್ರ, ಬೆಂಗಳೂರು.

***14. ಪಿ.ಸಿ. ಸುನಿಲ್***

15. ರವಿಕುಮಾರ್ ಬಿನ್ ಬಾಬು, 30 ವರ್ಷ, ವಾಸಃ ರಾಮಚಂದ್ರ ಬಿಲ್ಡಿಂಗ್, ನಂ-2, 7ನೇ ಮೈನ್, 4ನೇ ಕ್ರಾಸ್, ಹೊಂಗಸಂದ್ರ, ಬೆಂಗಳೂರು.

***15(ಎ). ಮನೋಜ್***

16. ಶಶಿಕುಮಾರ್ ಬಿನ್ ಮಾರಪ್ಪ, 27 ವರ್ಷ ವಾಸಃ ಕೇ/ಆ ಪೊಲೀಸ್ ರಾಮಯ್ಯ ರೋಟರಿ ನಗರ, ಕೋಡಿಚಿಕ್ಕನಹಳ್ಳಿ, ಬೆಂಗಳೂರು.

17. ನಾಗರಾಜು ಬಿನ್ ರಾಜಪ್ಪ, 28 ವರ್ಷ, ವಾಸಃ ಕೇ/ಆ ಮುನಿಹಾಲಪ್ಪ ಬಿಲ್ಡಿಂಗ್, ಮಹಾರಾಜ ಪಬ್ಲಿಕ್ ಶಾಲೆ ಬಳಿ ವೀರಸಂದ್ರ, ಬೆಂಗಳೂರ.

***18. ಗೋವಿಂದ ರಾಜು***

19. ರಮೇಶ ಬಿನ್ ರಾಜೇಗೌಡ, 25 ವರ್ಷ , ವಾಸ ಮುನಿಯಮ್ಮನಗರ ಮನೆ, 10 ನೇ ಕ್ರಾಸ್, ಅನ್ನಪೂರ್ಣೇಶ್ವರಿ ದೇವಸ್ಥಾನದ ಹತ್ತಿರ, ವಿರಾಟನಗರ, ಬೊಮ್ಮನಹಳ್ಳಿ, ಬೆಂಗಳೂರು.

***20. ಶಿವಯ್ಯ***

***21. ಭಾಸ್ಕರ್***

22. ವೆಂಕಟೇಶ್ ಗೌಡ (ಅ) ವೆಂಕಟೇಶ್ ಬಿನ್ ದೊಡ್ಡೇಗೌಡ, 24 ವರ್ಷ, ವಾಸಃ ಅಶ್ವಥ್ ನಾರಾಯಣರವರ ಮನೆ, ಕೋಡಿಚಿಕ್ಕನಹಳ್ಳಿ, ಬೆಂಗಳೂರು.

23. ನಿಂಗರಾಜು (ಅ) ಲಿಂಗ ಬಿನ್ ಬಸವಯ್ಯ, 30 ವರ್ಷ, ವಾಸಃ 18, 1ನೇ ಕ್ರಾಸ್, ಬೇಗೂರು ರಸ್ತೆ, ಚೌಡೇಶ್ವರಿ ದೇವಸ್ಥಾನದ ಹತ್ತಿರ, ಕೋಡಿಚಿಕ್ಕನಹಳ್ಳಿ, ಬೆಂಗಳೂರು.

24. ಪ್ರಸಾದ್ ಬಿನ್ ಕರಿಗೌಡ, 35 ವರ್ಷ, ವಾಸಃ ನಂ-85, 5ನೇ ಮೈನ್ ಕೃಷ್ಣಾ ಲೇಔಟ್, ದೇವರ ಚಿಕ್ಕನಹಳ್ಳಿ, ಬೆಂಗಳೂರು.

25. ಶಾಂತಕುಮಾರ್ ಬಿನ್ ಜೈಕುಡಿ, 28 ವರ್ಷ, ವಾಸಃ ನಂ-19/ಎ, 1ನೇ ಕ್ರಾಸ್, ಲಕ್ಷ್ಮೀ ಲೇಔಟ್, ಗಾರ್ವೆಬಾವಿಪಾಳ್ಯ, ಬೆಂಗಳೂರು.

26. ವಾಗರಾಜ ಬಿನ್ ಶಿವಣ್ಣ, 29 ವರ್ಷ, ವಾಸಃ ಜಯಂತ್‌ರವರ ಮನೆ, ಭೂಮಿಕಾ ನಿವಾಸ, ಗುರುದರ್ಶ ಶಾಲೆ ಹತ್ತಿರ, ಮೈಕೋ ಲೇಔಟ್, ಬೆಂಗಳೂರು.

27. ವಹದೇವಸ್ವಾಮಿ ಬಿನ್ ಶಿವಣ್ಣ, 22 ವರ್ಷ, ವಾಸಃ ರಾಕೇಶ್ ರೆಡ್ಡಿ ಬಿಲ್ಡಿಂಗ್, 9ನೇ ಮೈನ್, 1ನೇ ಕ್ರಾಸ್, ಹೊಂಗಸಂದ್ರ, ಬೆಂಗಳೂರು. split up on 16-12-21

28. ಶೇಖರ್ ಬಿನ್ ಚಿನ್ನಪ್ಪ, 26 ವರ್ಷ, ವಾಸಃ ನಂ-1024, 12ನೇ ಕ್ರಾಸ್, ಗಂಗಮ್ಮ ಲೇಔಟ್, ಮಂಗಮ್ಮನಪಾಳ್ಯ, ಬೆಂಗಳೂರು.

***29. ಶರತ್‌ಕುಮಾರ್***

***30. ಹರೀಶ್***

*31. ಪ್ರಸನ್ನ*
*32. ನರೇಶ*
*33. ಮಂಜು(ಅ) ಲಂಬು ಮಂಜ*
*34. ಮಹೇಂದ್ರ*
*35. ಪ್ರವೀಣ್*
*36. ರಾಜ*
*37. ಪುಟ್ಟರಾಜು (ಅ) ಲಿಂಗರಾಜು*
*38. ಚಿನ್ನಸ್ವಾಮಿ*
*39. ರಾಜುಗೌಡ*
*40. ಶೇಖರ್*
*41. ಲತಾ*
*42. ಲೀಲಾ*
*43. ಶ್ರೀಮತಿ ಬಾದಾಮಿ ದೇವಿ*
*44. ಕಲ್ಪನ*
*45. ಶೈಲ*
*46. ಪ್ರತಿಭಾ*

(2,3, 4, 6, 11, 14, 15(ಎ), 18, 20, 21, 29 ರಿಂದ 46ನೇ ಆರೋಪಿತರನ್ನು ಪ್ರಕರಣದಿಂದ ಪ್ರತ್ಯೇಕಿಸಲಾಗಿದೆ)

## ದೋಷಾರೋಪಣೆ

ಎಸ್. ಶ್ರೀಧರ., ಬಿ.ಇ., ಎಲ್ ಎಲ್.ಬಿ., ಬೆಂಗಳೂರು ನಗರದ ಮುಖ್ಯ ಮಹಾನಗರ ದಂಡಾಧಿಕಾರಿ ಆದ ನಾನು ಮೇಲ್ಕಂಡ ಆರೋಪಿತರಾದ ನಿಮ್ಮನ್ನು ಈ ಕೆಳಕಂಡಂತೆ ಆರೋಪಕ್ಕೆ ಗುರಿಪಡಿಸುತ್ತೇನೆ.

ದಿನಾಂಕ 18-04-2016 ರಂದು ಬೆಳಗ್ಗೆ 9-30ರ ಸಮಯದಲ್ಲಿ ಬೊಮ್ಮನಹಳ್ಳಿ, ರೂಪೇನ ಅಗ್ರಹಾರ, ಹೊಂಗಸಂದ್ರ, ಬೇಗೂರು, ಕೋಡಿಚಿಕ್ಕನಹಳ್ಳಿ ಪ್ರದೇಶದಲ್ಲಿರುವ ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡುವ ನೌಕರರು ಕೇಂದ್ರ ಸರ್ಕಾರದ ಪಿ.ಎಫ್. ನೀತಿಯನ್ನು ವಿರೋಧಿಸಿ ಸರ್ಕಾರದ ವಿರುದ್ಧ ಧಿಕ್ಕಾರ ಘೋಷಣೆ ಕೂಗಿ ಬೇಗೂರು ರಸ್ತೆಯಲ್ಲಿ ತಡೆ ಉಂಟು ಮಾಡಿ ಹೊಸುರು ರಸ್ತೆ,

ಬೊಮ್ಮನಹಳ್ಳಿ ಸರ್ಕಲ್ ರಸ್ತೆಯ ಎರಡೂ ಕಡೆಗಳಲ್ಲಿ ಗಾರ್ಮೆಂಟ್ಸ್ ನೌಕರರು ಜಮೆಗೊಂಡು ರಸ್ತೆ ತಡೆ ಉಂಟು ಮಾಡಿದ್ದು ಪೊಲೀಸ್ ಅಧಿಕಾರಿಗಳು ಸದರಿ ಕಾರ್ಮಿಕರಿಗೆ ನ್ಯಾಯಸಮ್ಮತವಾಗಿ ಪಿ.ಎಫ್. ಹಣ ಸಂದಾಯ ಮಾಡಿಸುವುದಾಗಿ ಭರವಸೆ ನೀಡಿದ್ದರೂ ಸಹ 1, 5, 7 ರಿಂದ 10, 12, 13, 15 ರಿಂದ 17, 19, 22 ರಿಂದ 28ನೇ ಆರೋಪಿತರಾದ ನೀವು ಪ್ರತ್ಯೇಕಿಸಲ್ಪಟ್ಟ ಉಳಿದ ಆರೋಪಿತರೊಂದಿಗೆ ಸೇರಿ ಅಕ್ರಮ ಕೂಟ ಕಟ್ಟಿಕೊಂಡು ಪೊಲೀಸ್ ಅಧಿಕಾರಿಗಳ ಮಾತುಗಳನ್ನು ಕೇಳಿಸಿಕೊಳ್ಳದೇ ಏಕಾಏಕಿ ಘೋಷಣೆ ಕೂಗಿ ರಸ್ತೆ ಮಧ್ಯ ಟೈರ್‌ಗಳಿಗೆ ಬೆಂಕಿ ಹಚ್ಚಿ ಅಶಾಂತಿ ವಾತಾವರಣ ಸೃಷ್ಟಿಸಿ ಬೆಳಗ್ಗೆ10-15 ರಿಂದ ಮಧ್ಯಾಹ್ನ 02.30 ರವರೆಗೆ ರಸ್ತೆ ತಡೆ ಉಂಟು ಮಾಡಿದ ಕಾರಣ ಪಿ.ಡಿ.ಪಿ.ಪಿ. ಕಾಯ್ದೆ ಕಲಂ 4 ಹಾಗೂ ಪಿ.ಡಿ.ಎಲ್.ಪಿ. ಕಾಯ್ದೆ ಕಲಂ 2(ಎ), 2(ಬಿ) ಸಹ ವಾಚಕ 149 ಐಪಿಸಿ ರಡಿ ದಂಡನೀಯವಾದ ಅಪರಾಧ ಎಸಗಿದ್ದು ನನ್ನ ಸಂಜ್ಞೆಯಲ್ಲಿರುತ್ತದೆ.

ಎರಡನೆಯದಾಗಿ, ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಅವಧಿಯಲ್ಲಿ ಮೇಲ್ಕಾಣಿಸಿದ ಆರೋಪಿಗಳು ಪ್ರತ್ಯೇಕಿಸಲ್ಪಟ್ಟ ಉಳಿದ ಆರೋಪಿತರೊಂದಿಗೆ ಅಕ್ರಮ ಕೂಟದ ಸದಸ್ಯರಾಗಿ ಮುಂದುವರಿಯುತ್ತಾ, ದೊಂಬಿ, ಗಲಾಟೆ ಮಾಡುವ ಉದ್ದೇಶದಿಂದ ಕೈಯಲ್ಲಿ ಅಪಾಯಕರ ವಸ್ತುಗಳಾದ ಕಲ್ಲು, ಇಟ್ಟಿಗೆ ಇತ್ಯಾದಿಗಳನ್ನು ಇಟ್ಟುಕೊಂಡು ದೊಂಬಿ ಎಬ್ಬಿಸಿ ಗಲಾಟೆ ಮಾಡಿದ ಕಾರಣ ಭಾ.ದಂ.ಸಂ. ಕಲಂ 143, 147, 148 ಸಹ ವಾಚಕ 149 ರಡಿ ದಂಡನೀಯವಾದ ಅಪರಾಧ ಎಸಗಿದ್ದು ನನ್ನ ಸಂಜ್ಞೆಯಲ್ಲಿರುತ್ತದೆ.

ಮೂರನೆಯದಾಗಿ, ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಅವಧಿಯಲ್ಲಿ ಮೇಲ್ಕಾಣಿಸಿದ ಆರೋಪಿಗಳು ಪ್ರತ್ಯೇಕಿಸಲ್ಪಟ್ಟ ಉಳಿದ ಆರೋಪಿತರೊಂದಿಗೆ ಅಕ್ರಮ ಕೂಟದ ಸದಸ್ಯರಾಗಿ ಮುಂದುವರಿಯುತ್ತಾ, ಅಪರಾಧ ಮಾಡುವ ಉದ್ದೇಶದಿಂದ ಒಳಸಂಚು ಮಾಡಿ ಪೊಲೀಸ್ ಅಧಿಕಾರಿಗಳು ಅವರ ಕರ್ತವ್ಯ ನಿರ್ವಹಣೆ ಮಾಡದಂತೆ ತಡೆ ಉಂಟು ಮಾಡಿದ ಕಾರಣ ಭಾ.ದಂ.ಸಂ. ಕಲಂ 120(ಬಿ), 189 ಸಹ ವಾಚಕ 149 ರಡಿ ದಂಡನೀಯವಾದ ಅಪರಾಧ ಎಸಗಿದ್ದು ನನ್ನ ಸಂಜ್ಞೆಯಲ್ಲಿರುತ್ತದೆ.

ನಾಲ್ಕನೆಯದಾಗಿ, ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಅವಧಿಯಲ್ಲಿ ಮೇಲ್ಕಾಣಿಸಿದ ಆರೋಪಿಗಳು ಪ್ರತ್ಯೇಕಿಸಲ್ಪಟ್ಟ ಉಳಿದ ಆರೋಪಿತರೊಂದಿಗೆ ಅಕ್ರಮ ಕೂಟದ ಸದಸ್ಯರಾಗಿ ಮುಂದುವರಿಯುತ್ತಾ, ಸ್ಥಳದಲ್ಲಿ ಅಶಾಂತಿ ವಾತಾವರಣ ಸೃಷ್ಠಿ ಆಗದಂತೆ ಪೊಲೀಸ್ ಅಧಿಕಾರಿಗಳು ಕರ್ತವ್ಯ ನಿರ್ವಹಣೆ ಮಾಡುವಾಗ ಆರೋಪಿತರು ಮಧ್ಯಾಹ್ನ 2.30ರ ಸಮಯದಲ್ಲಿ ಸುಮಾರು 10 ಕಿ.ಮೀ. ದೂರದವರೆಗೆ ರಸ್ತೆ ತಡೆ ಉಂಟು ಮಾಡಿದ್ದು ಪೊಲೀಸ್ ಅಧಿಕಾರಿಗಳು ಕಾರ್ಮಿಕರನ್ನು ಚದುರಿಸುವಾಗ ಆರೋಪಿತರಾದ ನೀವು ಕಲ್ಲು, ಇಟ್ಟಿಗೆ, ಚಪ್ಪಲಿ ಇನ್ನು ಇತ್ಯಾದಿ ವಸ್ತುಗಳನ್ನು ತೆಗೆದುಕೊಂಡು ಪೊಲೀಸರ ಮೇಲೆ ಬಿಸಾಡಿ ಹಲ್ಲೆ ಮಾಡಿ ಪೊಲೀಸರ ಜೀಪು, ಬಿಎಂಟಿಸಿ ಬಸ್ ಹಾಗೂ ಸಾರ್ವಜನಿಕ ಸ್ವತ್ತುಗಳಿಗೆ ನಷ್ಟ ಉಂಟು ಮಾಡಿ ಪೊಲೀಸರು ತಮ್ಮ ಕರ್ತವ್ಯ ನಿರ್ವಹಣೆ ಮಾಡದಂತೆ ಅವರಿಗೆ ಬೆದರಿಕೆ ಹಾಕಿ ಅವರ ಕರ್ತವ್ಯಕ್ಕೆ ಅಡಚಣೆ ಉಂಟು ಮಾಡಿದ ಕಾರಣ ಭಾ.ದಂ.ಸಂ. ಕಲಂ 332, 353 ಸಹ ವಾಚಕ 149 ರಡಿ ದಂಡನೀಯವಾದ ಅಪರಾಧ ಎಸಗಿದ್ದು ನನ್ನ ಸಂಜ್ಞೆಯಲ್ಲಿರುತ್ತದೆ.

ಕಡೆಯದಾಗಿ, ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಅವಧಿಯಲ್ಲಿ ಮೇಲ್ಕಾಣಸಿದ ಆರೋಪಿಗಳು ಪ್ರತ್ಯೇಕಿಸಲ್ಪಟ್ಟ ಉಳಿದ ಆರೋಪಿತರೊಂದಿಗೆ ಅಕ್ರಮ ಕೂಟದ ಸದಸ್ಯರಾಗಿ ಮುಂದುವರಿಯುತ್ತಾ, ರಸ್ತೆ ಮಧ್ಯದಲ್ಲಿ ಟೈರ್‌ಗಳಿಗೆ ಬೆಂಕಿ ಹಚ್ಚಿ, ಪೊಲೀಸ್ ಜೀಪು, ಬಿಎಂಟಿಸಿ ಬಸ್, ಸಾರ್ವಜನಿಕ ಸ್ವತ್ತುಗಳಿಗೆ ಕಲ್ಲು, ಇಟ್ಟಿಗೆ, ಚಪ್ಪಲಿ ಬಿಸಾಕಿ ನಷ್ಟ ಉಂಟು ಮಾಡಿದ ಕಾರಣ ಭಾ.ದಂ.ಸಂ. ಕಲಂ 427 ಸಹ ವಾಚಕ 149 ರಡಿ ದಂಡನೀಯವಾದ ಅಪರಾಧ ಎಸಗಿದ್ದು ನನ್ನ ಸಂಜ್ಞೆಯಲ್ಲಿರುತ್ತದೆ.

ಆದ್ದರಿಂದ ಆರೋಪಿತರಾದ ನೀವು ಮೇಲ್ಕಂಡ ಆರೋಪಗಳಿಗೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗತಕ್ಕದ್ದೆಂದು ಈ ಮೂಲಕ ನಿರ್ದೇಶಿಸುತ್ತೇನೆ.

**(ಎಸ್.ಶ್ರೀಧರ),**
ಮುಖ್ಯ ಮಹಾನಗರ ದಂಡಾಧಿಕಾರಿ,
ಬೆಂಗಳೂರು ನಗರ.

1. ಮೇಲೆ ಹೇಳಿದಂತೆ ನಿಮಗೆ ಓದಿ ಹೇಳಿ ವಿವರಿಸಿದ ದೋಷಾರೋಪಣೆಯನ್ನು ಅರ್ಥಮಾಡಿಕೊಂಡಿರಾ?

ಉತ್ತರಃ

**1**ನೇ ಆರೋಪಿ-

**5**ನೇ ಆರೋಪಿ-

**7**ನೇ ಆರೋಪಿ-

**8**ನೇ ಆರೋಪಿ-

**9**ನೇ ಆರೋಪಿ-

**10**ನೇ ಆರೋಪಿ-

**12**ನೇ ಆರೋಪಿ-

**13**ನೇ ಆರೋಪಿ-

**15**ನೇ ಆರೋಪಿ-

**16**ನೇ ಆರೋಪಿ-

**17**ನೇ ಆರೋಪಿ-

**19**ನೇ ಆರೋಪಿ-

**22**ನೇ ಆರೋಪಿ-

**23**ನೇ ಆರೋಪಿ-

**24**ನೇ ಆರೋಪಿ-

**25**ನೇ ಆರೋಪಿ-

**26**ನೇ ಆರೋಪಿ-

**27**ನೇ ಆರೋಪಿ- split up on 16-12-21

**28**ನೇ ಆರೋಪಿ-

2. ಅಪರಾಧವನ್ನು ಒಪ್ಪಿಕೊಳ್ಳುವಿರಾ ಅಥವಾ ಆರೋಪ ವಿಚಾರಣೆಯಾಗಬೇಕ**?**
ಉತ್ತರಃ

**1**ನೇ ಆರೋಪಿ-

**5**ನೇ ಆರೋಪಿ-

**7**ನೇ ಆರೋಪಿ-

**8**ನೇ ಆರೋಪಿ-

**9**ನೇ ಆರೋಪಿ-

**10**ನೇ ಆರೋಪಿ-

**12**ನೇ ಆರೋಪಿ-

**13**ನೇ ಆರೋಪಿ-

**15**ನೇ ಆರೋಪಿ-

**16**ನೇ ಆರೋಪಿ-

**17**ನೇ ಆರೋಪಿ-

**19**ನೇ ಆರೋಪಿ-

**22**ನೇ ಆರೋಪಿ-

**23**ನೇ ಆರೋಪಿ-

**24**ನೇ ಆರೋಪಿ**-**

**25**ನೇ ಆರೋಪಿ**-**

**26**ನೇ ಆರೋಪಿ**-**

**27**ನೇ ಆರೋಪಿ**-** split up on 16-12-21

**28**ನೇ ಆರೋಪಿ**-**

ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿಗಳಿಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು ಅವು ಸರಿಯಾಗಿರುತ್ತವೆಂದು ಈ ಮೂಲಕ ದೃಢೀಕರಿಸಿದೆ.

ದಿನಾಂಕಃ **...............**

ಮುಖ್ಯ ಮಹಾನಗರ ದಂಡಾಧಿಕಾರಿ,
ಬೆಂಗಳೂರು ನಗರ.